

**ರಾಕ್‌ಲೈನ್ ಸುಧಾಕರ್ ಹಾಸ್ಯನಟರಾಗಿ ಸಹೃದಯರಿಗೆ ಪರಿಚಿತರಾಗಿದ್ದರೂ, ಚಿತ್ರ ನಿರ್ಮಾಣದ ಚಟುವಟಿಕೆಗಳಲ್ಲಿ ಅವರು ಹೆಚ್ಚು ಕ್ರಿಯಾಶೀಲರಾಗಿದ್ದವರು. ಬದುಕಿನ ಮುಕ್ಕಾಲು ಭಾಗವನ್ನು ಶೂಟಿಂಗ್ ಸ್ಪಾಟ್‌ನಲ್ಲೇ ಕಳೆದಿರುವ ಅವರು, ರಾಕ್‌ಲೈನ್ ಪ್ರೊಡಕ್ಷನ್ಸ್ ಸಂಸ್ಥೆಯ ಬೆನ್ನೆಲುಬಾಗಿದ್ದವರು.**

ತೆಗೆದುಕೊಂಡುಬಿಡುತ್ತಿದ್ದರು. ವೆಂಕಟೇಶ್ ಅಷ್ಟೊಂದು ವಿಶ್ವಾಸವಿಟ್ಟಿದ್ದ ಆ ವ್ಯಕ್ತಿ ಬೇರಾರೂ ಅಲ್ಲ, ರಾಕ್‌ಲೈನ್ ಸುಧಾಕರ್!

ರಾಕ್‌ಲೈನ್ ಸುಧಾಕರ್ ಒಬ್ಬ ಅಸಾಮಾನ್ಯ ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಅಂತ ಸಿನಿಮಾಮಂದಿಗೆ ಬಿಟ್ರೆ ಬೇರೆಯವರಿಗೆ ಗೊತ್ತಿರಲಿಕ್ಕಿಲ್ಲ. ರಾಕ್‌ಲೈನ್ ವೆಂಕಟೇಶ್ ಅವರ ತಂದೆಯ ಜೊತೆ ಆತ್ಮೀಯವಾದ ಒಡನಾಟ ಇಟ್ಕೊಂಡಿದ್ದ ಇವರು, ತದನಂತರ ಅವರ ಮಗನ ನಿರ್ಮಾಣ ಸಂಸ್ಥೆಯಲ್ಲಿ ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆಗಿ ಕೆಲಸ ಮಾಡಿದಂತಹ ವ್ಯಕ್ತಿ. ರಾಕ್‌ಲೈನ್ ಪ್ರೊಡಕ್ಷನ್ಸ್ ಅನ್ನೋ ಒಂದೇ ಸಂಸ್ಥೆಯಲ್ಲಿ ಸರಿಸುಮಾರು ಇಪ್ಪತ್ತು ವರ್ಷಕ್ಕೂ ಅಧಿಕ ಕಾಲ ಗಣನೀಯ ಸೇವೆ ಸಲ್ಲಿಸಿದ್ದಂತಹ ಶ್ರಮಜೀವಿ .

ಕನ್ನಡ ಮಾತ್ರವಲ್ಲದೇ ತೆಲುಗು, ತಮಿಳು, ಹಿಂದಿ, ಮಲೆಯಾಳಂ ಭಾಷೆಗಳಲ್ಲಿಯೂ ಈ ಸಂಸ್ಥೆ ಹಲವಾರು ಸಿನಿಮಾಗಳನ್ನು ನಿರ್ಮಿಸಿದೆ. ಇದರ ಮಾಲೀಕರು ರಾಕ್‌ಲೈನ್ ವೆಂಕಟೇಶ್. ಇವರ ಬಳಿ ಮ್ಯಾನೇಜರ್ ಆಗಿ ಕೆಲಸ ಮಾಡಿದ ಸುಧಾಕರ್ ಅವರೂ ರಾಕ್‌ಲೈನ್ ಸುಧಾಕರ್ ಅಂತಲೇ ಹೆಸರು ತಗೋತಾರೆ ಅಂದ್ರೆ ತಮಾಷೆಯ ಮಾತಲ್ಲ.

ವೆಂಕಟೇಶ್ ಅವರು ನಿರ್ಮಾಣ ಸಂಸ್ಥೆಯನ್ನು ಹುಟ್ಟುಹಾಕಿದ ಆರಂಭದ ದಿನಗಳಲ್ಲಿ ಆರ್ಥಿಕವಾಗಿ ನಷ್ಟ ಅನುಭವಿಸಿದ್ದರು. ಅಂತಹ ಕಷ್ಟದ ದಿನಗಳಲ್ಲಿಯೂ ಜೊತೆಗಿದ್ದು ಕೆಲಸ ಮಾಡಿ ಮುಂದೆ ಇದೇ ಸಂಸ್ಥೆ ಬ್ಲಾಕ್ ಬಸ್ಟರ್ ಸಿನಿಮಾಗಳನ್ನು ನಿರ್ಮಿಸಿ ಅತ್ಯಧಿಕವಾಗಿ ಹಣ ಮಾಡಿದಾಗಲೂ ಜೊತೆಗಿದ್ದು ಕೆಲಸ ಮಾಡಿದವರು ಸುಧಾಕರ್ .

ವೆಂಕಟೇಶ್ ತಮ್ಮ ಮೇಲಿಟ್ಟಿದ್ದ ನಂಬಿಕೆಗೆ ಯಾವತ್ತೂ ಕುಂದಾಗಲು ಬಿಡುತ್ತಿರಲಿಲ್ಲ ಸುಧಾಕರ್. ಸಿನಿಮಾ ನಿರ್ದೇಶಕರು ಅಪೇಕ್ಷಿಸಿದ ಯಾವುದೇ ಊರನ್ನಾಗಲೀ, ಎಂತಹ ಲೊಕೇಷನ್ನೇ ಆಗಲಿ ಮುಂದೆ ನಿಂತು ಪರ್ಮೀಷನ್‌ನಿಂದ ಹಿಡಿದು ಪ್ರತಿಯೊಂದನ್ನೂ ನೋಡಿಕೊಂಡು ಅವರಿಗೆ ಬೇಕಾದ್ದನ್ನು ಒದಗಿಸಿ ಶೂಟಿಂಗಿಗೆ ಯಾವುದೇ ತೊಂದರೆಯಾಗದಂತೆ ಅನುವು ಮಾಡಿಕೊಡುತ್ತಿದ್ದರು .

ಒಂದಲ್ಲ ಎರಡಲ್ಲ, ಹತ್ತಿಪ್ಪತ್ತು ವರುಷ ಸಿನಿಮಾ ಕ್ಷೇತ್ರದಲ್ಲೇ ಸವೆದಿದ್ದರ ಅನುಭವ ಅವರಿಗೆ ಯಾವ ರೀತಿ ಇತ್ತೆಂದರೆ, ಪ್ರೊಡಕ್ಷನ್‌ನಲ್ಲಿ ಕೆಲಸ ಮಾಡುವವರು ಪೇಮೆಂಟ್‌ಗೆ ಇವರ ಬಳಿ ಬಂದಾಗ ಬಿಲ್ಲು ನೀಡಲು ಹೆದರುತ್ತಿದ್ದರು. ಆ ಥರ ಕರಾರುವಕ್ಕಾಗಿ ಸುಧಾಕರ್ ಲೆಕ್ಕ ಕಂಡುಹಿಡೀತಿದ್ರು. ಮೋಸದ ಬಿಲ್ಲುಗಳನ್ನು ಹರಿದು ಆ ಕಾರ್ಮಿಕನನ್ನು ಇನ್ನಿಲ್ಲದಂತೆ ಜರಿಯುತ್ತಿದ್ದರು.

ತುಂಬಾನೇ ಡೇರಿಂಗು ಮತ್ತೆ ಯಾರ ಮುಲಾಜಿಗೂ ಒಳಗಾಗುತ್ತಿರಲಿಲ್ಲ. ವಿಪರೀತ ಅನ್ನುವಷ್ಟು ಡೈನಮಿಕ್ ನೇಚರಿನ ವ್ಯಕ್ತಿ.

ಇವರ ಸ್ವಾಮಿನಿಷ್ಠೆ ಅಂದ್ರೆ ಅಷ್ಟಿಷ್ಟಲ್ಲ, ಪರಾಕಾಷ್ಠೆ ಅಂತಲೇ ಹೇಳಬಹುದು. ಎಂತಹ ಸಂದರ್ಭದಲ್ಲೂ ರಾಕ್‌ಲೈನ್ ವೆಂಕಟೇಶ್ ಅವರನ್ನ ಬಿಟ್ಟುಕೊಡುತ್ತಿರಲಿಲ್ಲ. ಇವರ ಬಾಯಲ್ಲಿ ಯಾವತ್ತೂ ಅವರ ಹೆಸರು ಬರುತ್ತಿರಲಿಲ್ಲ; 'ಯಜಮಾನ್ರು' ಅಂತಾನೇ ಕರೆಯೋರು.

ಓದೋ ವಿದ್ಯಾರ್ಥಿಗಳು ಅಂದ್ರೆ ತುಂಬಾನೇ ಇಷ್ಟಪಡೋವ್ರು. ಓದನ್ನು ಅರ್ಧಕ್ಕೆ ಬಿಟ್ಟು ಸಿನಿಮಾಗೆ ಬರೋವ್ರನ್ನು ಬಯ್ತಿದ್ರು. 'ನಾವಂತೂ ಓದ್ಲಿಲ್ಲ, ನೀವುಗಳಾದ್ರೂ ಓದಿ' ಅಂತ ಹೇಳೋವ್ರು. ಈ ಪ್ರೀತಿಯೇ ಅವರು ಮಗನನ್ನು ಎಂ.ಬಿ.ಎ. ಮಾಡಿಸಲು ಸಾಧ್ಯವಾಗಿಸಿತು ಅನ್ಸುತ್ತೆ.

ಇವರು ನಟನಾಗಬೇಕೆಂದು ಕನಸುಮನಸಿನಲ್ಲೂ ಎಣಿಸಿದವರಲ್ಲ. ಇವರ ವಿಶಿಷ್ಟವಾದ ಧ್ವನಿ, ವಿಲಕ್ಷಣ ಮ್ಯಾನರಿಸಂ ನಿರ್ದೇಶಕ ಯೋಗರಾಜ್ ಭಟ್ಟರನ್ನು ಆಕರ್ಷಿಸಿತು. ಇದೇ ಕಾರಣಕ್ಕೆ ಅವರು ಇವರನ್ನು ನಟನೆಗೆ ಒಪ್ಪಿಸಿದ್ದರು. ನಟಿಸಿದ ಮೊದಲ ಹಾಸ್ಯಪಾತ್ರದಲ್ಲೇ (ಪಂಚರಂಗಿ ಸಿನಿಮಾ) ಎಲ್ಲರನ್ನೂ ರಂಜಿಸಿ ಗುರುತಿಸಿಕೊಂಡಿದ್ದರು. ಅದೂ ಅಲ್ಲದೆ ಸಿನಿಮಾ ಬೇರೆ ಸೂಪರ್ ಹಿಟ್ ಆಗಿತ್ತು. ಅಲ್ಲಿಂದೀಚೆಗೆ ಹಲವು ಪಾತ್ರಗಳು ಇವರನ್ನು ಹುಡುಕಿಕೊಂಡು ಬರಲಾರಂಭಿಸಿತು. ನೋಡುನೋಡುತ್ತಿದ್ದಂತೆ ಚಿತ್ರರಂಗದಲ್ಲಿ ಬಿಡುವಿಲ್ಲದ ಪೋಷಕ ನಟನಾಗಿ ಗುರುತಿಸಿಕೊಳ್ಳಲಾರಂಭಿಸಿದರು. ಇವರ ಪ್ಲಸ್ ಏನೆಂದರೆ ಇವರು ನಟಿಸುತ್ತಿರಲಿಲ್ಲ, ಸಹಜವಾಗಿ ಹೇಗಿರುತ್ತಿದ್ದರೋ ಕ್ಯಾಮೆರಾ ಮುಂದೆಯೂ ಹಾಗೇ ಇರುತ್ತಿದ್ದರು. ಇದು ನಿರ್ದೇಶಕ ಸೂರಿಯವರಿಗೆ ತುಂಬಾ ಇಷ್ಟ ಆಗಿ, ಅವರು ತಮ್ಮ ಎಲ್ಲಾ ಸಿನಿಮಾಗಳಲ್ಲಿಯೂ ಇವರಿಗೊಂದು ಪಾತ್ರ ಹಾಕಿಸುತ್ತಿದ್ದರು. 'ಟಗರು' ಸಿನಿಮಾದಲ್ಲಿನ ಡಾಲಿಯ ಜೊತೆಯ 'ಸುಬ್ಬಿ' ಪಾತ್ರ ಇವರಿಗೆ ತುಂಬಾ ಹೆಸರನ್ನು ತಂದುಕೊಟ್ಟಿತ್ತು. 'ಅಂಕಲ್‌ನ ಹೊಡೀತೀನಿ ಸುಬ್ಬಿ' ಅಂತ ಡಾಲಿ ಹೇಳೋ ಮಾತು ತುಂಬಾ ವೈರಲ್ ಆಗಿತ್ತು.

ಒಮ್ಮೆ ಯಾವುದೋ ಹೋಟೆಲ್ಲಿನ ಪಡಸಾಲೆಯಲ್ಲಿ ತಮ್ಮ ಯಜಮಾನರಾದ ರಾಕ್‌ಲೈನ್ ವೆಂಕಟೇಶ್ ಅವರೊಂದಿಗೆ ಗಂಭೀರವಾದ ವಿಚಾರವನ್ನು ಚರ್ಚಿಸುತ್ತಿದ್ದಾಗ ಒಂದಷ್ಟು ಅಭಿಮಾನಿಗಳು ಬಂದು 'ಸಾರ್ ಸೆಲ್ಫಿ' ಎಂದು ಸುಧಾಕರ್ ಅವರನ್ನು ಕೇಳಿದ್ದಾರೆ. ಈ ಸಂದರ್ಭ ಸುಧಾಕರ್ ಅವರಿಗೆ ಮುಜುಗರ ತರಿಸಿದ್ದರೆ, ವೆಂಕಟೇಶ್ ಅವರಿಗೆ ನಗು ತರಿಸಿತ್ತು.

ತೀರಾ ಇತ್ತೀಚೆಗೆ ಕೊರೊನಾ ಪಾಸಿಟಿವ್ ಆಗಿ ಆಸ್ಪತ್ರೆಗೆ ದಾಖಲಾಗಿದ್ದ ಸುಧಾಕರ್ ನೆಗೆಟಿವ್ ರಿಪೋರ್ಟ್ ಪಡೆದು ಡಿಸ್‌ಚಾರ್ಜ್ ಆಗಿ ಹೊರಬಂದಿದ್ದರು. ಆದರೆ ಜವರಾಯ ಮಾರುವೇಷದಲ್ಲಿ ಬಂದು ಇವರು ವೇಷಕ್ಕಾಗಿ ಬಣ್ಣ ಹಾಕಿ ಕೂತಿದ್ದಾಗ ಹೊತ್ತೊಯ್ದಿದ್ದಾನೆ.

ಬದುಕಿನ ಮುಕ್ಕಾಲು ಭಾಗ ಶೂಟಿಂಗ್ ಸ್ಪಾಟ್‌ನಲ್ಲೇ ಕಳೆದಿದ್ದ ರಾಕ್‌ಲೈನ್ ಸುಧಾಕರ್, ತಮ್ಮ ಬದುಕನ್ನು ಕಳೆದುಕೊಂಡಿದ್ದೂ ಶೂಟಿಂಗ್ ಸ್ಪಾಟ್‌ನಲ್ಲೇ. ಎಲ್ಲರನ್ನೂ ಕಿಚಾಯಿಸುತ್ತಾ ಕಾಲೆಳೆಯುತ್ತಾ ತಮಾಷೆಯಿಂದ ಮಾತನಾಡಿಸುತ್ತಾ ಇದ್ದ ಸಕ್ಕರೆಯಂಥ ಸುಧಾಕರ್ ಅಣ್ಣ 'ಶುಗರ್ ಲೆಸ್' ಅನ್ನೋ ಸಿನಿಮಾದ ಚಿತ್ರೀಕರಣದಲ್ಲಿ ಅಸುನೀಗಿದ್ದು ವಿಪರ್ಯಾಸವಲ್ಲದೇ ಇನ್ನೇನು?

ಪ್ರತಿಕ್ರಿಯಿಸಿ: feedback@sudha.co.in